ಆದರೆ, ಪರಿಸ್ಥಿತಿ ಬದಲಾಗುತ್ತಿದೆ. ಕಳೆದ ಕೆಲವು ದಶಕಗಳಿಂದ ಆಧುನಿಕ ಭಾಷೆಗಳ ಅಧ್ಯಯನ ಹೆಚ್ಚಾಗಿದೆ. ಜೀವಂತ ಆಧುನಿಕ ಭಾಷೆಗಳ ಮೊದಲ ಘಟ್ಟದ ವ್ಯಾಕರಣಗಳನ್ನು ಐರೋಪ ಭಾಷೆಗಳಲ್ಲಿ ವೈಜ್ಞಾನಿಕವಾಗಿ ಮತಪ್ರಚಾರಕರು ಬರೆದರು. ಅವರಿಗೆ ಬೈಬಲ್ ಅನುವಾದಿಸಬೇಕಿತ್ತು. ಆಮೇಲೆ ಏನಾಯಿತು? ಕಳೆದ ನೂರು ವರ್ಷಗಳಲ್ಲಿ ಯುರೋಪಿನಲ್ಲಿ ಎರಡು ಮಹಾಯುದ್ಧಗಳು ನಡೆದವು. ವಿಶೇಷವಾಗಿ ಎರಡನೇ ಮಹಾಯುದ್ಧದ ನಂತರದ ಕಾಲ, ಅದರ ಹಿಂದಿನ ಕಾಲಕ್ಕಿಂತ ತುಂಬಾ ಭಿನ್ನ. ಹಿಂದಿನ ಕಾಲದಲ್ಲಿ ಒಂದು ರೀತಿಯ ಸಾಂಸ್ಕೃತಿಕ–ಧಾರ್ಮಿಕ ಮುಗ್ಧತೆ ಇತ್ತು. ಅದು ಪೂರ್ತಿ ಕಳೆದುಹೋಯಿತು. ಎಲ್ಲರೂ ರವಿವಾರ ಚರ್ಚಿಗೆ ಹೋಗುತ್ತಿದ್ದರು. ಪಾದ್ರಿ ಏನು ಹೇಳ್ತಾರೆ ಅಂತ ಕೇಳುತ್ತಿದ್ದರು. ಆದರೆ, ಈಗ ಚರ್ಚಿನ ಪಾತ್ರ ಸಮಾಜದಲ್ಲಿ ತುಂಬಾ ಕ್ಷೀಣ. ಜರ್ಮನಿಯಲ್ಲಿ ನೀವು ಭಕ್ತರಾಗಿದ್ದರೆ ನಿಮ್ಮ ಹೆಸರು ಅಧಿಕೃತವಾಗಿ ಚರ್ಚಿನಲ್ಲಿ ದಾಖಲೆಯಾಗುತ್ತದೆ. ಚರ್ಚ್‌ತೆರಿಗೆ ಕೊಡಬೇಕು. ಆದರೆ, ಈಗ ಇಲ್ಲಿಯ ಜನಸಂಖ್ಯೆಯಲ್ಲಿ ಶೇಕಡ 60 ಅಧಾರ್ಮಿಕರು. ಅವರು ಯಾವ ಚರ್ಚಿಗೂ ಹೋಗುವುದಿಲ್ಲ. ಉಳಿದ ಶೇಕಡ 40ರಷ್ಟು ಜನರೂ ಪ್ರತಿವಾರ ಚರ್ಚಿಗೆ ಹೋಗುವುದಿಲ್ಲ. ಆದರೆ, ಮೆಂಬರ್‌ಶಿಪ್ ರದ್ದು ಮಾಡಿಲ್ಲ. ಏನೂ ಒಂದು ರೀತಿಯ ಭಾವುಕತೆ, ಸ್ವಲ್ಪ ಭಯ. ನಮ್ಮ ದೇಶ, ನಮ್ಮ ಇತಿಹಾಸ. ಸ್ವಲ್ಪ ತೆರಿಗೆ ಕೊಟ್ಟರೆ ತೊಂದರೆ ಇಲ್ಲ ಅಂತ. ಇಟಲಿ ದೇಶದಲ್ಲಿ ಅಷ್ಟು ಚರ್ಚುಗಳಿವೆ. ಎಲ್ಲ ಖಾಲಿ. ಆದರೆ, ಕಿಟೆಲರ ಕಾಲದಲ್ಲಿ, ಧಾರ್ಮಿಕ ದೃಷ್ಟಿಯಿಂದ ಜನರು ಇಂತಹ ಕೆಲಸಗಳಿಗೆ ಬೆಂಬಲ ಕೊಡುತ್ತಿದ್ದರು. 'ಕ್ರೈಸ್ತಧರ್ಮ ಒಳ್ಳೆಯದು. ಪ್ರಪಂಚಕ್ಕೆ ಅದರಿಂದ ಒಳ್ಳೆಯದಾಗುತ್ತದೆ. ಆದ್ದರಿಂದ ಧರ್ಮ ಪ್ರಚಾರವಾಗಲಿ. ಅದು ಪವಿತ್ರ ಕೆಲಸ' ಅಂತ ನಂಬಿಕೆ ಇತ್ತು. ಈಗ ನಂಬಿಕೆ ಪೂರ್ತಿ ಹೋಗಿದೆ. ಜನರು ತಮ್ಮ ಜೀವನದಲ್ಲಿ ಧಾರ್ಮಿಕತೆ ನಿಜವಾಗಿ ಪ್ರಯೋಜನಕಾರಿ ಹೌದೊ ಅಲ್ಲವೊ ಅಂತ ಸಂದೇಹ ಪಡುತ್ತಾರೆ. ಬೇರೆ ಧಾರ್ಮಿಕ ಪರಂಪರೆಗಳ ಕಡೆ ಅವರ ಮನಸ್ಸು ತಿರುಗಿದೆ.

◆ **ಈ ಬೆಳವಣಿಗೆಗಳು ನಿಮ್ಮ ಸಂಸ್ಥೆಯ ಮೇಲೆ ಪ್ರಭಾವ ಬೀರಿವೆಯಾ?**



ಎಸ್. ನಟರಾಜ ಬೂದಾಳು, ರಹಮತ್ ತರೀಕೆರೆ ಹಾಗೂ ರೊಬೆರ್ತ್ ಜೆಯ್ದೆನ್‌ಬೊಸ್